ಓ ಎಸ್ ನಂಃ 300-20
ಪಿ ಡಬ್ಲ್ಯೂ ಃ 1

ದಿಃ 08-02-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಆರ್ ಹೆಚ್ ವಕೀಲರಿಂದ

19. ದಾವಾ ಆಸ್ತಿ ಹಾಗೂ ನಮಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ನಾವು ಈ ದಾವೆಯನ್ನು ಸ್ವಾಧೀನತೆಗೆ ಮಾತ್ರ ಹೂಡಿರುತ್ತೇವೆ ಮಾಲೀಕತ್ವಕ್ಕೆ ಅಲ್ಲ ಎಂದರೆ ನಿಜ. ದಿನಾಂಕಃ 15-10-1984 ರ ಭೂ ನ್ಯಾಯ ಮಂಡಳಿಯ ಆದೇಶದಂತೆ ಅಮೀರ್ ಸಾಬ್ ರವರು ದಾವಾ ಆಸ್ತಿಗೆ ಗೇಣಿದಾರರಾಗಿರುತ್ತಾರೆ ಎಂದರೆ ನಿಜ. ಅಮೀರ್ ಸಾಬ್ ರವರು ದಾವಾ ಆಸ್ತಿಗೆ ಗೇಣಿದಾರರಾದ ನಂತರ ಅವರ ದಾವಾ ಆಸ್ತಿಗೆ ಭೂ ಕಂದಾಯ ಕಟ್ಟುತ್ತಿದ್ದರು ಮತ್ತು ಅವರ ಹೆಸರಿಗೆ ಮ್ಯುಟೇಷನ್ ಆಗಿತ್ತು ಎಂದರೆ ಗೊತ್ತಿಲ್ಲ. ಅಮೀರ್ ಸಾಬ್‌ರವರು ಯಾವಾಗ ತೀರಿಕೊಂಡಿರುತ್ತಾರೆ ಗೊತ್ತಿಲ್ಲ. 1 ನೇ ಪ್ರತಿವಾದಿ ಅಮೀರ್ ಸಾಬ್‌ರವರ ಹೆಂಡತಿ ಎಂದರೆ ನಿಜ. 1 ನೇ ಪ್ರತಿವಾದಿ ಹಾಗೂ ಅಮೀರ್ ಸಾಬ್‌ರವರಿಗೆ ಮಕ್ಕಳು ಇರುವುದಿಲ್ಲ ಎಂದರೆ ನಿಜ. ಅಮೀರ್ ಸಾಬ್‌ರವರು ತೀರಿಕೊಂಡ ನಂತರ 1 ನೇ ಪ್ರತಿವಾದಿ ದಾವಾ ಆಸ್ತಿಗೆ ವಾರಸುದಾರರು ಆಗಿರುತ್ತಾರೆ ಎಂದರೆ ಗೊತ್ತಿಲ್ಲ. ಅಮೀರ್ ಸಾಬ್‌ರವರು ತೀರಿಕೊಂಡ ನಂತರ ದಾವಾ ಆಸ್ತಿ ಫವತಿ ಆಧಾರದ ಮೇರೆಗೆ 1 ನೇ ಪ್ರತಿವಾದಿಯ ಹೆಸರಿಗೆ ಬಂದಿರುತ್ತದೆ ಎಂದರೆ ಗೊತ್ತಿಲ್ಲ. ಅದರಂತೆ 1 ನೇ ಪ್ರತಿವಾದಿ ದಾವಾ ಆಸ್ತಿಯ ಮಾಲೀಕರು ಆಗಿರುತ್ತಾರೆ ಎಂದರೆ ಗೊತ್ತಿಲ್ಲ. ಅಮೀರ್ ಸಾಬ್‌ರವರು ತೀರಿಕೊಂಡ ನಂತರ ದಾವಾ ಆಸ್ತಿ 1 ನೇ ಪ್ರತಿವಾದಿಯ ಹೆಸರಿಗೆ ಮ್ಯುಟೇಷನ್ ಆಗಿ ಅವರೇ ದಾವಾ ಆಸ್ತಿಗೆ ಕಂದಾಯ ಕಟ್ಟುತ್ತಿದ್ದರು ಎಂದರೆ ಗೊತ್ತಿಲ್ಲ.

20. ನನ್ನ ತಂದೆ ಮಹಮ್ಮದ್ ಅಕ್ಬರ್ ಸಾಬ್‌ರವರು 2008 ರಲ್ಲಿ ತೀರಿಕೊಂಡಿರುತ್ತಾರೆ. 1 ನೇ ಪ್ರತಿವಾದಿ ದಾವಾ ಆಸ್ತಿಯನ್ನು 2 ನೇ ಪ್ರತಿವಾದಿಗೆ 2004 ರಲ್ಲಿ ಮಾರಾಟ ಮಾಡುವಾಗ ನನ್ನ ತಂದೆ ಜೀವಂತವಿದ್ದರು ಎಂದರೆ ನಿಜ. ದಾವಾ ಆಸ್ತಿಯನ್ನು ಮಾರಾಟ ಮಾಡುವಾಗ ನಾವಾಗಲೀ ನನ್ನ ತಂದೆಯಾಗಲೀ ಮಾರಾಟಕ್ಕೆ ತಕರಾರು ಮಾಡಿಲ್ಲ ಎಂದರೆ ನಿಜ, ಸಾಕ್ಷಿ ಮುಂದುವರೆದು ನನಗೆ ಗೊತ್ತಿರಲಿಲ್ಲ ಎಂದು ಹೇಳುತ್ತಾರೆ. ಆದ್ದರಿಂದ ಆ ಸಮಯದಲ್ಲಿ ನಾವು ದಾವಾ ಆಸ್ತಿಯ ಸ್ವಾಧೀನತೆಯನ್ನು ಹೊಂದಿರಲಿಲ್ಲ ಆದ ಕಾರಣ ನಮಗೆ ಮಾರಾಟದ ವಿಷಯ ಗೊತ್ತಿಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2004 ರಲ್ಲಿ ದಾವಾ ಆಸ್ತಿ ಮಾರಾಟವಾಗುವಾಗ ನಾವು ದಾವಾ ಆಸ್ತಿಯ ಸ್ವಾಧೀನತೆಯನ್ನು ಹೊಂದಿದ್ದೆವು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ನಮ್ಮ ವಕೀಲರನ್ನು ಕೇಳಬೇಕು ಎಂದು ಹೇಳುತ್ತಾರೆ.

21. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುವ ಹಾಗೆ ಡಿಸೆಂಬರ್ 2019 ರಲ್ಲಿ 2 ನೇ ಪ್ರತಿವಾದಿಯ ಕಡೆಯವರು ದಾವಾ ಆಸ್ತಿಗೆ ಬಂದು ವ್ಯವಸಾಯ ಮಾಡಲು ನಮಗೆ ತೊಂದರೆ ಕೊಟ್ಟಿರುತ್ತಾರೆ ಎಂದು ಹೇಳುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ನಮ್ಮ ವಕೀಲರಿಗೆ ಕೇಳಬೇಕು ಎಂದು ಹೇಳುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುವ ಹಾಗೆ ಸೆಪ್ಟಂಬರ್ ಮೊದಲನೇ ವಾರ 2020 ರಲ್ಲಿ 2 ನೇ ಪ್ರತಿವಾದಿಯ ಕಡೆಯವರು ನಮ್ಮ ಸ್ವಾಧೀನತೆಗೆ ತೊಂದರೆ ಕೊಟ್ಟಿರುತ್ತಾರೆ ಎಂದು ಹೇಳುವ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಿಪಿ 2 ಮತ್ತು 3 ನ್ನು ನಾನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ4 ನ್ನು ಈ ದಾವೆಗಾಗಿ ನಾವು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ10-13 ರಲ್ಲಿ ನಮ್ಮ ಹೆಸರುಗಳನ್ನು ತೋರಿಸಿಲ್ಲ ಎಂದರೆ ಗೊತ್ತಿಲ್ಲ. ನಾವುಗಳು ದಾವಾ ಆಸ್ತಿಯ ಸ್ವಾಧೀನತೆಯನ್ನು ಹೊಂದಿಲ್ಲ ಆದ ಕಾರಣ ನಮ್ಮ ಹೆಸರುಗಳನ್ನು ನಿಪಿ 10-13 ರಲ್ಲಿ ತೋರಿಸಿಲ್ಲ ಎಂದರೆ ಸರಿಯಲ್ಲ. ನಿಪಿ14-21 ರಲ್ಲಿ ದಾವಾ ಆಸ್ತಿ ಇರುವುದಿಲ್ಲ ಎಂದರೆ ಸರಿಯಲ್ಲ.

22. ಈ ದಾವೆಯನ್ನು ಯಾವ ದಿನಾಂಕ ಹೂಡಿರುತ್ತೇವೆ ನಮ್ಮ ವಕೀಲರಿಗೆ ಗೊತ್ತಿದ್ದು ಇದನ್ನು 2019-20 ರಲ್ಲಿ ಹೂಡಿರುತ್ತೇವೆ ಎಂದು ಹೇಳುತ್ತಾರೆ. ಈ ದಾವೆಯನ್ನು ಹೂಡುವ ಕಾಲಕ್ಕೆ ನಾವುಗಳು ದಾವಾ ಆಸ್ತಿಯ ಸ್ವಾಧೀನತೆಯನ್ನು ಹೊಂದಿದ್ದೆವು ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. 2008 ರಲ್ಲಿ ನನ್ನ ತಂದೆ ತೀರಿಕೊಳ್ಳುವ ಮೊದಲೇ ದಾವಾ ಆಸ್ತಿಯನ್ನು ಮಾರಾಟ ಮಾಡಿದ್ದು ಆ ವಿಷಯ ನನ್ನ ತಂದೆಗೂ ಗೊತ್ತಿದ್ದರೂ ಸಹ ಮಾರಾಟಕ್ಕೆ ಯಾವುದೇ ತಕರಾರು ಮಾಡಿರಲಿಲ್ಲ ಎಂದರೆ ಆಗ ಭೂ ನ್ಯಾಯ ಮಂಡಳಿಯಲ್ಲಿ ಮೊಕದ್ದಮೆ ಚಾಲ್ತಿಯಲ್ಲಿತ್ತು ಎಂದು ಹೇಳುತ್ತಾರೆ. ನಾನು ದಾಖಲೆಗಳನ್ನು ಸೃಷ್ಟಿ ಮಾಡಿ ಸುಳ್ಳು ದಾವೆಯನ್ನು ಹೂಡಿದ್ದು ದಾವೆಯಲ್ಲಿ ಯಾವುದೇ ನಿಜಾಂಶ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
**ಮಾಗಡಿ.**